# ಜಿಲ್ಲಾ ಪಂಚಾಯಿತಿ, ಹಾಸನ.

ಸಂಖ್ಯೆ: ಜಿ.ಪಂಹಾ/ಪ.ಶಾ/ 57/2011-12 ದಿನಾಂಕ: 29-12-2011

## ಸಭಾಹ್ವಾನ ಪತ್ರ

ಶ್ರೀಮತಿ ಸುಲೋಚನಾ ರಾಮಕೃಷ್ಣ, ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ, ಇವರ ಅಧ್ಯಕ್ಷತೆಯಲ್ಲಿ **ದಿನಾಂಕ: 06-01-2012ರಂದು ಶುಕ್ರವಾರ ಮದ್ಯಾಹ್ನ: 03-00ಗಂಟೆಗೆ** ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯನ್ನು ಕರೆಯಲಾಗಿದೆ. ಸದರಿ ಸಭೆಗೆ ಸದಸ್ಯರುಗಳು ಸಕಾಲಕ್ಕೆ ಹಾಜರಾಗಬೇಕೆಂದು ಕೋರಿದೆ.

ಸದಸ್ಯ ಕಾರ್ಯದರ್ಶಿ ಹಾಗೂ<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ<br>ಜಿಲ್ಲಾ ಪಂಚಾಯಿತಿ, ಹಾಸನ

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಹೊಳೆನರಸೀಪುರ ತಾ: ಹಂಗರಹಳ್ಳಿ ಗ್ರಾಮದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಬಾಡಿಗೆ ನಿಗದಿಪಡಿಸುವ ಬಗ್ಗೆ.
2. ಜಿಲ್ಲಾ ಪಂಚಾಯತ್ ಆಡಳಿತ ಶಾಖೆ ಹಾಗೂ ಲೆಕ್ಕಪತ್ರ ಶಾಖೆಗೆ ಕಂಪ್ಯೂಟರ್, ಯು.ಪಿ.ಎಸ್ ಸ್ಕ್ಯಾನರ್ ಮತ್ತು ಜೆರಾಕ್ಸ್ ಯಂತ್ರ ಖರೀದಿಸುವ ಬಗ್ಗೆ.
3. ಚನ್ನರಾಯಪಟ್ಟಣ ಮುಸಾಫೀರ್ ಖಾನಾ ಕಟ್ಟಡ ತೆರವುಗೊಳಿಸಲು ಅನುಮತಿ- ಕುರಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

ಪ್ರತಿಯನ್ನು:

1. ಶ್ರೀಮತಿ ಸುಲೋಚನಾ ರಾಮಕೃಷ್ಣ, ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ
2. ಶ್ರೀಮತಿ ಕುಸುಮ ಬಾಲಕೃಷ್ಣ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
3. ಶ್ರೀಮತಿ ಜಿ.ಟಿ. ಇಂದಿರಾಧರ್ಮಪ್ಪ, ಸದಸ್ಯರು, ಸಾಮಾನ್ಯ ನ್ಯಾಯ ಸ್ಥಾಯಿ ಸಮಿತಿ
4. ಶ್ರೀ ದೇವೇಗೌಡ ಉರುಫ್ ಪಾಪಣ್ಣಿ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
5. ಶ್ರೀ ಬಿಳಿಚೌಡಯ್ಯ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ

6. ಶ್ರೀ ಬಿ.ಎನ್.ರಾಮಚಂದ್ರ (ಭೈರಮುಡಿ ರಾಮಚಂದ್ರು), ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
7. ಶ್ರೀಮತಿ ಹೆಚ್.ಎನ್.ಗೌರಮ್ಮ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
8. ಮಾನ್ಯ ಅಧ್ಯಕ್ಷರು/ಮಾನ್ಯ ಉಪಾಧ್ಯಕ್ಷರು ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತ ಶಾಖೆಗೆ ಮಾಹಿತಿಗಾಗಿ
9. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
10. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತ ಶಾಖೆಗೆ
11. ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯಿತಿ, ಹಾಸನ.
12. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
13. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ/ ಚನ್ನರಾಯಪಟ್ಟಣ
16. ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
17. ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
18. ಉಪ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಗಳ ಇಲಾಖೆ, ಹಾಸನ.
19. ಕಛೇರಿ ಪ್ರತಿ.

**ದಿನಾಂಕ: 06-01-2012ರಂದು ಅಪರಾಹ್ನ: 03-00ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

**ಅಧ್ಯಕ್ಷತೆ: ಶ್ರೀಮತಿ ಸುಲೋಚನಾ ರಾಮಕೃಷ್ಣ**

**ಅಧ್ಯಕ್ಷರು,**

**ಸಾಮಾನ್ಯ ಸ್ಥಾಯಿ ಸಮಿತಿ**

**ಹಾಜರಿ:05** **ಗೈರು ಹಾಜರಿ:02**

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, , ಮುಖ್ಯ ಯೋಜನಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಹೊಳೆನರಸೀಪುರ ತಾ: ಹಂಗರಹಳ್ಳಿ ಗ್ರಾಮದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಬಾಡಿಗೆ ನಿಗದಿಪಡಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅ(8)ಕಬಾನಿ 190/2011-12 ದಿನಾಂಕ: 21-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹೊಳೆನರಸೀಪುರ ತಾ: ಹಂಗರಹಳ್ಳಿ ಗ್ರಾಮದಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯನ್ನು ಕನ್ನಡ ಯುವಶಕ್ತಿ ಯುವಕರ ಸಂಘದ ಸಮುದಾಯ ಭವನದಲ್ಲಿ ದಿನಾಂಕ: 01-08-2010ರಿಂದ ಬಾಡಿಗೆ ಆಧಾರದ ಮೇಲೆ ಪ್ರಾರಂಭಿಸಲಾಗಿದ್ದು, ಸದರಿ ಕಟ್ಟಡವು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುತ್ತದೆ. ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನರವರು ಮಾಹೆಯಾನ ಬಾಡಿಗೆ ರೂ.22300/-ಗಳನ್ನು ನಿಗದಿಪಡಿಸಿ ನಮೂನೆ-10ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಕಟ್ಟಡದ ಮಾಲೀಕರಿಗೆ ದಿನಾಂಕ: 01-08-2010ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನ ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನ ಇವರು ಕೋರಿರುವಂತೆ ಹೊಳೆನರಸೀಪುರ ತಾ: ಹಂಗರಹಳ್ಳಿ ಗ್ರಾಮದ ಕನ್ನಡ ಯುವಶಕ್ತಿ ಯುವಕರ ಸಂಘದ ಸಮುದಾಯ ಭವನದಲ್ಲಿ ನಡೆಯುತ್ತಿರುವ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಕಟ್ಟಡಕ್ಕೆ ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಸ್ಥಳ ಪರಿಶೀಲನೆ ನಡೆಸಿದ್ದು, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆಯ |

| | | | |
|---|---|---|---|
| | | | ಇವರ ಶಿಫಾರಸ್ಸಿನಂತೆ ಮಾಹೆಯಾನ ರೂ.22300/- (ರೂಪಾಯಿ ಇಪ್ಪತ್ತೆರಡು ಸಾವಿರದ ಮುನ್ನೂರು ಮಾತ್ರ)ಗಳಂತೆ ದಿನಾಂಕ: 01-08-2010ರಿಂದ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 2 | ಜಿಲ್ಲಾ ಪಂಚಾಯತ್ ಆಡಳಿತ ಶಾಖೆ ಹಾಗೂ ಲೆಕ್ಕಪತ್ರ ಶಾಖೆಗೆ ಕಂಪ್ಯೂಟರ್ ಯು.ಪಿ.ಎಸ್ ಸ್ಕ್ಯಾನರ್ ಮತ್ತು ಜೆರಾಕ್ಸ್ ಯಂತ್ರ ಖರೀದಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(6)/2011-12 ದಿನಾಂಕ: 11-11-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮಾನ್ಯ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರು ಕಛೇರಿಗಳಲ್ಲಿ ಎಲ್.ಎಂ.ಎಸ್/ ಎಫ್.ಎಂ.ಎಸ್ ತಂತ್ರಾಂಶವನ್ನು ಜಾರಿಗೆ ತರಲು ಸೂಚಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಹಾಸನ ಇಲ್ಲಿ ಎಲ್.ಎಂ.ಎಸ್/ ಎಫ್.ಎಂ.ಎಸ್ ತಂತ್ರಾಂಶವನ್ನು ಕಛೇರಿಯಲ್ಲಿ ಅಳವಡಿಸಿ ಪತ್ರ ವ್ಯವಹಾರ ಮಾಡಲು ಕಂಪ್ಯೂಟರ್, ಯು.ಪಿ.ಎಸ್. ಸ್ಕ್ಯಾನರ್ ಯಂತ್ರವನ್ನು ಜಿಲ್ಲಾ ಪಂಚಾಯತ್ ಆಡಳಿತ ಶಾಖೆ ಹಾಗೂ ಲೆಕ್ಕಪತ್ರ ಶಾಖೆಗೆ ಅವಶ್ಯಕವಾಗಿರುತ್ತದೆ. ಆದ್ದರಿಂದ, ಜಿಲ್ಲಾ ಪಂಚಾಯತ್ ಆಡಳಿತ ಶಾಖೆಗೆ 6 ಕಂಪ್ಯೂಟರ್, 1 ಮಾನಿಟರ್, 20 ನಿಮಿಷ ಬ್ಯಾಕ್ ಅಪ್ ಇರುವ 8 ಯು.ಪಿ.ಎಸ್ ಒಂದು ಸ್ಕ್ಯಾನರ್, ಒಂದು ಜೆರಾಕ್ಸ್ ಯಂತ್ರ, ಬೆರಳಚ್ಚು ಶಾಖೆಗೆ 2 ಗಂಟೆ ಬ್ಯಾಕ್ ಅಪ್ ಇರುವ ಆನ್ ಲೈನ್ ಯು.ಪಿ.ಎಸ್ ಹಾಗೂ ಲೆಕ್ಕಪತ್ರ ಶಾಖೆಗೆ 6 ಕಂಪ್ಯೂಟರ್, 6 ಯು.ಪಿ.ಎಸ್ ಖರೀದಿಸುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ಸದರಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಜಿಲ್ಲಾ ಪಂಚಾಯತ್ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಕ್ಕೆ ಮಂಡಿಸಿದೆ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಪಂಚಾಯತ್ ಹಾಸನ ಇಲ್ಲಿ ಎಲ್.ಎಂ.ಎಸ್/ ಎಫ್.ಎಂ.ಎಸ್ ತಂತ್ರಾಂಶವನ್ನು ಕಛೇರಿಯಲ್ಲಿ ಅಳವಡಿಸಿ ಪತ್ರ ವ್ಯವಹಾರ ಮಾಡಲು ಜಿಲ್ಲಾ ಪಂಚಾಯತ್ ಆಡಳಿತ ಶಾಖೆಗೆ 6 ಕಂಪ್ಯೂಟರ್, 1 ಮಾನಿಟರ್, 20 ನಿಮಿಷ ಬ್ಯಾಕ್ ಅಪ್ ಇರುವ 8 ಯು.ಪಿ.ಎಸ್ ಒಂದು ಸ್ಕ್ಯಾನರ್, ಒಂದು ಜೆರಾಕ್ಸ್ ಯಂತ್ರ, ಬೆರಳಚ್ಚು ಶಾಖೆಗೆ 2 ಗಂಟೆ ಬ್ಯಾಕ್ ಅಪ್ ಇರುವ ಆನ್ ಲೈನ್ ಯು.ಪಿ.ಎಸ್ ಹಾಗೂ ಲೆಕ್ಕಪತ್ರ ಶಾಖೆಗೆ 6 ಕಂಪ್ಯೂಟರ್, 6 ಯು.ಪಿ.ಎಸ್ ಡಿ.ಜಿ.ಎಸ್ ಅಂಡ ಡಿ ದರದಲ್ಲಿ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 3 | ಚನ್ನರಾಯಪಟ್ಟಣ ಮುಸಾಫೀರ್ ಖಾನಾ ಕಟ್ಟಡ ತೆರವುಗೊಳಿಸಲು ಅನುಮತಿ -ಕುರಿತು | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(2)ತಾಪಂಸಿ/30/2011-12 ದಿ: 02-11-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಚನ್ನರಾಯಪಟ್ಟಣದ ಮಧ್ಯಭಾಗದಲ್ಲಿರುವ ಮುಸಾಫೀರ್ ಖಾನಾ ಜಾಗವು ತಾಲ್ಲೂಕು ಪಂಚಾಯಿತಿಗೆ ಸೇರಿದ ಜಾಗವಾಗಿದ್ದು, ಪುರಸಭಾ ವ್ಯಾಪ್ತಿಯಲ್ಲಿರುತ್ತದೆ. (ಆಸ್ತಿ ನಂ.3187-244) ಈ ಆಸ್ತಿಯ ವಿಸ್ತೀರ್ಣ 1607-63 ಚ.ಮೀ ಆಗಿದ್ದು, ಈ ಜಾಗದಲ್ಲಿ ತುಂಬಾ ಹಳೆಯ ಮಂಗಳೂರು ಹೆಂಚಿನ ಕಟ್ಟಡವಿರುತ್ತದೆ. ಈ ಶಿಥಿಲ ಕಟ್ಟಡವು 124 ವರ್ಷಗಳ ಹಿಂದಿನದಾಗಿದ್ದು, ಈ ಆಸ್ತಿಯಿಂದ ತಾಲ್ಲೂಕು ಪಂಚಾಯಿತಿಗೆ ಯಾವುದೇ ಆದಾಯ ಬರುತ್ತಿಲ್ಲದಿರುವುದರಿಂದ, ಈ ಕಟ್ಟಡವನ್ನು ಕೆಡವಿ ವಾಣಿಜ್ಯ ಉದ್ದೇಶಕ್ಕಾಗಿ ಕಟ್ಟಡವನ್ನು ನಿರ್ಮಿಸುವ ಬಗ್ಗೆ ದಿನಾಂಕ: 17-08-2011ರ ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿರುವುದರಿಂದ, ಸದರಿ ಕಟ್ಟಡವನ್ನು ಕೆಡವಿ ಆ ಜಾಗದಲ್ಲಿ ವಾಣಿಜ್ಯ ಕಟ್ಟಡವನ್ನು ನಿರ್ಮಿಸಲು ಅನುಮತಿ ನೀಡುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚನ್ನರಾಯಪಟ್ಟಣ ಇವರು ಕೋರಿರುತ್ತಾರೆ. ಹಾಗೂ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕಾರ್ಯನಿರ್ವಾಹಕ ಅಧಿಕಾರಿ ಚನ್ನರಾಯಪಟ್ಟಣ ಇವರು ಕೋರಿರುವಂತೆ ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿರುವ ತಾಲ್ಲೂಕು ಪಂಚಾಯಿತಿಯ ಆಸ್ತಿಯಾದ ಮುಸಾಫೀರ್ ಖಾನಾ ಕಟ್ಟಡವನ್ನು (ಆಸ್ತಿ ನಂ. 3187-244) ದಿನಾಂಕ: 17-08-2011ರ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯದಂತೆ, ಸದರಿ ಕಟ್ಟಡವನ್ನು ಕೆಡವಿ ಆ ಜಾಗದಲ್ಲಿ ವಾಣಿಜ್ಯ |

| | | | |
|---|---|---|---|
| | | ಕೋರಿರುತ್ತಾರೆ. ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಈ ಸಾಲಿನ ಅಭಿವೃದ್ಧಿ ಅನುದಾನದಲ್ಲಿ ಲಭ್ಯವಿರುವ ರೂ.5.00ಲಕ್ಷ ಹಾಗೂ 2011-12ನೇ ಸಾಲಿನ ಅನಿರ್ಬಂದಿತ ಅನುದಾನದಲ್ಲಿನ ರೂ.10.00ಲಕ್ಷಗಳಲ್ಲಿ ಭರಿಸಲು ಸಭೆಯಲ್ಲಿ ನಿರ್ಣಯಿಸಲಾಗಿರುವುದಾಗಿ ತಿಳಿಸಿದ್ದು, ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿರುತ್ತಾರೆ. | ಕಟ್ಟಡವನ್ನು 2011-12ನೇ ಸಾಲಿನ ಅಭಿವೃದ್ಧಿ ಅನುದಾನ ರೂ.5.00ಲಕ್ಷಗಳು ಮತ್ತು ಅನಿರ್ಬಂದಿತ ಅನುದಾನದಲ್ಲಿನ ರೂ.10.00ಲಕ್ಷಗಳಲ್ಲಿ ನಿರ್ಮಿಸಲು ಅನುಮತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 4 | ಹಾಸನ ನಗರದಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಹೆಚ್ಚುವರಿ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)ಕಬಾನಿ 188/2011-12 ದಿನಾಂಕ: 28-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹಾಸನ ನಗರದಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಹೆಚ್ಚುವರಿಯಾಗಿ ಶ್ರೀ ರುದ್ರೇಗೌಡ ಬಿನ್ ಜವರೇಗೌಡ, 7ನೇ ಅಡ್ಡರಸ್ತೆ, ಕೆ.ಆರ್.ಪುರಂ ಹಾಸನ ಇವರ ಒಡೆತನದಲ್ಲಿರುವ ಕಟ್ಟಡವನ್ನು ದಿನಾಂಕ: 10-10-2011ರಿಂದ ಬಾಡಿಗೆಗೆ ಪಡೆಯಲಾಗಿದ್ದು, ಸದರಿ ಕಟ್ಟಡವು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರತ್ತದೆ. ಈ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ರವರು ಮಾಹೆಯಾನ ಬಾಡಿಗೆ ರೂ.35,800/-ಗಳನ್ನು ನಿಗದಿಪಡಿಸಿ ನಮೂನೆ-10ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಕಟ್ಟಡದ ಮಾಲೀಕರಿಗೆ ದಿನಾಂಕ: 10-10-2011ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನ ಇವರು ಕೋರಿರುತ್ತಾರೆ. | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಕೋರಿರುವಂತೆ, ಶ್ರೀ ರುದ್ರೇಗೌಡ ಬಿನ್ ಜವರೇಗೌಡ, 7ನೇ ಅಡ್ಡರಸ್ತೆ, ಕೆ.ಆರ್.ಪುರಂ ಹಾಸನ ಇವರ ಒಡೆತನದಲ್ಲಿರುವ ಕಟ್ಟಡದಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ದಿನಾಂಕ: 10-10-2011ರಿಂದ ಮಾಹೆಯಾನ ರೂ.35800/- (ರೂಪಾಯಿ ಮೂವತ್ತೈದು ಸಾವಿರದ ಎಂಟು ನೂರು ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 5 | ಪರಿಷತ್ ಶಾಖೆಗೆ ಜೆರಾಕ್ಸ್ ಯಂತ್ರವನ್ನು ಖರೀದಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಪ.ಶಾ/55/2011-12 ದಿ: 28-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಪರಿಷತ್ ಶಾಖೆಯಲ್ಲಿ ನಡೆಯುವ ವಿವಿಧ ಸಭೆ ಸಮಾರಂಭಗಳಿಗೆ ಅವಶ್ಯ ಬುಕ್ ಲೆಟ್ ಗಳನ್ನು ಆಗಿಂದಾಗ್ಗೆ ಸಿದ್ದಪಡಿಸಬೇಕಾಗಿದ್ದು, ಅದಕ್ಕಾಗಿ ಒಂದು ಜೆರಾಕ್ಸ್ ಯಂತ್ರದ ಅವಶ್ಯಕತೆಯಿರುತ್ತದೆ. ಆದರೆ, ಪರಿಷತ್ ಶಾಖೆಯಲ್ಲಿ ಈಗಿರುವ ಜೆರಾಕ್ಸ್ ಯಂತ್ರವು ಸುಮಾರು 10 ವರ್ಷದಷ್ಟು ಹಳೆಯದಾಗಿರುತ್ತದೆ. ಅಲ್ಲದೆ, ಯಂತ್ರ ಕೆಟ್ಟಿದ್ದು, ದುರಸ್ತಿಪಡಿಸಲು ಸಾಧ್ಯವಿರುವುದಿಲ್ಲವೆಂದು ರಿಪೇರಿದಾರರು ತಿಳಿಸಿರುತ್ತಾರೆ. ಕ್ಯಾನನ್ ಸಂಸ್ಥೆಯ ಜೆರಾಕ್ಸ್ ಯಂತ್ರವು ನವೀನ ಮಾದರಿಯದಾಗಿದ್ದು, ಪರಿಷತ್ ಶಾಖೆಗೆ Canon iR 2318L/2420 ಮಾದರಿಯ ಯಂತ್ರಕ್ಕೆ ರೂ.87,290/- (Vat ಶೇ.5ರಷ್ಟು ಪ್ರತ್ಯೇಕ) ಮೊತ್ತದಲ್ಲಿ ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ Copier Techno System | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಪರಿಷತ್ ಶಾಖೆಯಲ್ಲಿ ನಡೆಯುವ ವಿವಿಧ ಸಭೆ ಸಮಾರಂಭಗಳಿಗೆ ಅವಶ್ಯ ಬುಕ್ ಲೆಟ್ ಗಳನ್ನು ಸಿದ್ದಪಡಿಸಲು ಅನುಕೂಲವಾಗುವಂತೆ ಪ್ರತಿಗಳನ್ನು ತೆಗೆಯಲು Canon ಸಂಸ್ಥೆಯ Canon iR 2318L/2420 ಮಾದರಿಯ ಯಂತ್ರಕ್ಕೆ ರೂ.87,290/- (Vat ಶೇ.5ರಷ್ಟು |

| | | | |
|---|---|---|---|
| | | ಸಂಸ್ಥೆಯ ವತಿಯಿಂದ ಒಂದು ಜೆರಾಕ್ಸ್ ಯಂತ್ರವನ್ನು ಖರೀದಿಸಲು ಅನುಮೋದನೆ ನೀಡುವ ಬಗ್ಗೆ ವಿಷಯವನ್ನು ಸಾಮಾನ್ಯ ಸ್ಥಾಯಿ ಸಮಿತಿ ಸಭೆಗೆ ಮಂಡಿಸಿದೆ. | ಪ್ರತ್ಯೇಕ) ಮೊತ್ತದಲ್ಲಿ ಡಿ.ಜಿ.ಎಸ್ ಅಂಡ್ ಡಿ ದರದ, Copier Techno System ಸಂಸ್ಥೆಯ ವತಿಯಿಂದ ಒಂದು ಜೆರಾಕ್ಸ್ ಯಂತ್ರವನ್ನು ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 6 | ಪರಿಷತ್ ಶಾಖೆಗೆ ಸ್ಕ್ಯಾನರ್ ಯಂತ್ರವನ್ನು ಖರೀದಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಪ.ಶಾ/56/2011-12 ದಿ: 28-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಪರಿಷತ್ ಶಾಖೆಯಲ್ಲಿನ ಕಡತಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಗಣಕ ಯಂತ್ರದಲ್ಲಿ ಎಲ್.ಎಂ.ಎಸ್ ಮತ್ತು ಎಫ್.ಎಂ.ಎಸ್ ಮಾಡಲು ಮತ್ತು ಈ-ಮೇಲ್ ಮಾಡಲು ಅನುಕೂಲವಾಗುವಂತೆ ಸ್ಕ್ಯಾನರ್ ಯಂತ್ರದ ಅವಶ್ಯಕತೆಯಿದ್ದು, ಅಂದಾಜು ರೂ.3500/-ಗಳ ವೆಚ್ಚದಲ್ಲಿ ಕೊಟೇಷನ್ ಮತ್ತು ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ಒಂದು ಸ್ಕ್ಯಾನರ್ ಯಂತ್ರವನ್ನು ಖರೀದಿಸಲು ಅನುಮೋದನೆ ನೀಡುವ ಬಗ್ಗೆ ವಿಷಯವನ್ನು ಸಾಮಾನ್ಯ ಸ್ಥಾಯಿ ಸಮಿತಿ ಸಭೆಗೆ ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಪರಿಷತ್ ಶಾಖೆಯಲ್ಲಿನ ಕಡತಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಗಣಕ ಯಂತ್ರದಲ್ಲಿ ಎಲ್.ಎಂ.ಎಸ್ ಮತ್ತು ಎಫ್.ಎಂ.ಎಸ್ ಮಾಡಲು ಮತ್ತು ಈ-ಮೇಲ್ ಮಾಡಲು ಅನುಕೂಲವಾಗುವಂತೆ ಅಂದಾಜು ರೂ.3500/-ಗಳ ವೆಚ್ಚದಲ್ಲಿ ಕೊಟೇಷನ್ ಅಥವಾ ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ಒಂದು ಸ್ಕ್ಯಾನರ್ ಯಂತ್ರವನ್ನು ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 7 | ಹಾಸನ ಪಶು ವೈದ್ಯಕೀಯ ಮಹಾ ವಿದ್ಯಾಲಯ ಆವರಣಕ್ಕೆ ಹೊಂದಿರುವ ಕೆರೆ ಮತ್ತು ಗುಂಡು ತೋಪು ಹಸ್ತಾಂತರಿಸುವ ಬಗ್ಗೆ. | ಜಿಪಂಹಾ/ಯೋ.ವಿ(4)ಪಶುವೈಮಹೆ/2011-12 ದಿನಾಂಕ: 31-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಪಶುವೈದ್ಯಕೀಯ ಮಹಾವಿದ್ಯಾಲಯಕ್ಕೆ ಹೊಂದಿಕೊಂಡಿರುವ ಕೆರೆ ಮತ್ತು ಗುಂಡುತೋಪನ್ನು ಹಸ್ತಾಂತರಿಸುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಸ್ಥಳ ಪರಿಶೀಲನೆ ಮಾಡಿ ಕೆರೆ ಮತ್ತು ಗುಂಡು ತೋಪನ್ನು ಪಶು ವೈದ್ಯಕೀಯ ಮಹಾ ವಿದ್ಯಾಲಯಕ್ಕೆ ನೀಡಿದಲ್ಲಿ ರೈತರಿಗೂ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಗೆ ಹಾಗೂ ಜಾನುವಾರುಗಳ ಮೇವಿಗೆ ತೊಂದರೆಯಾಗುವುದರಿಂದ ಕೆರೆ ಮತ್ತು ಗುಂಡುತೋಪನ್ನು ಹಸ್ತಾಂತರಿಸಬಾರದೆಂದು ಸಾರ್ವಜನಿಕರು ಒತ್ತಾಯಿಸಿರುತ್ತಾರೆ. ಆದ್ದರಿಂದ, ಈ ಬಗ್ಗೆ ನಿರ್ಣಯಕ್ಕಾಗಿ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸಲಾಗಿದೆ.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಮಾತನಾಡುತ್ತಾ, ಪಶುವೈದ್ಯಕೀಯ ಮಹಾ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ಪಶುವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಹೊಂದಿಕೊಂಡಿರುವ ಕೆರೆ ಮತ್ತು ಗುಂಡು ತೋಪನ್ನು ಹಸ್ತಾಂತರಿಸುವ ಬಗ್ಗೆ ಸ್ಥಳೀಯ ಜನರೊಂದಿಗೆ ಸಮಾಲೋಚಿಸಿ ಕೆರೆ ಹಾಗೂ ಗುಂಡು ತೋಪು ಪಶುವೈದ್ಯಕೀಯ ಮಹಾ ವಿದ್ಯಾಲಯಕ್ಕೆ ಅಗತ್ಯ ಇರುವ ಬಗ್ಗೆ ಮನವರಿಕೆ ಮಾಡಿಕೊಟ್ಟು ಮತ್ತೊಮ್ಮೆ |

| | | | |
|---|---|---|---|
| | | ವಿದ್ಯಾಲಯಕ್ಕೆ ಹೊಂದಿಕೊಂಡಿರುವ ಕೆರೆ ಮತ್ತು ಗುಂಡುತೋಪನ್ನು ಪಶುವೈದ್ಯಕೀಯ ಮಹಾ ವಿದ್ಯಾಲಯಕ್ಕೇ ನೀಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. | ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 8 | 2011-12ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮದ ಕಾಮಗಾರಿಗಳನ್ನು ಬದಲಾವಣೆ ಮಾಡಿಕೊಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಯೋ.ವಿ(4)ಕಾಮಗಾರಿ ಬದಲಾವಣೆ/2011-12 ದಿ: 31-12-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿಯವರು ಮಾತನಾಡುತ್ತಾ, 2011-12ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಡಿಯಲ್ಲಿನ ಕಾಮಗಾರಿಗಳ ಬದಲಾವಣೆಗೆ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳು ಕೋರಿದ್ದು, ಸದರಿ ಕಾಮಗಾರಿಗಳ ಬದಲಾವಣೆಗೆ ಅನುಮೋದನೆ ನೀಡುವಂತೆ ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳು ಕೋರಿರುವಂತೆ 2011-12ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಡಿಯಲ್ಲಿನ ಕಾಮಗಾರಿಗಳ ಬದಲಾವಣೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 9 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| 1 | ಉಪಾಧ್ಯಕ್ಷರ ಕೊಠಡಿಯಲ್ಲಿರುವ ಗಣಕಯಂತ್ರಕ್ಕೆ ಹೊಸ ಪ್ರಿಂಟರ್ ಖರೀದಿಸುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀಮತಿ ಜಿ.ಟಿ.ಇಂದಿರಾಧರ್ಮಪ್ಪರವರು ಮಾತನಾಡುತ್ತಾ, ಉಪಾಧ್ಯಕ್ಷರ ಕೊಠಡಿಯಲ್ಲಿರುವ ಗಣಕಯಂತ್ರಕ್ಕೆ ಡ್ಯಾಟ್ ಮ್ಯಾಟ್ರಿಕ್ ಪ್ರಿಂಟರ್ ಇದ್ದು, ತುಂಬಾ ಹಳೆಯದಾಗಿರುತ್ತದೆ. ಆದ್ದರಿಂದ, ತ್ವರಿತವಾಗಿ ಪ್ರತಿಗಳನ್ನು ತೆಗೆಯಲು ಸಾಧ್ಯವಾಗುವಂತೆ ಹೆಚ್.ಪಿ. ಲೇಜರ್ ಜೆಟ್ ಪ್ರಿಂಟರ್ ಅನ್ನು ಖರೀದಿಸಿ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪಾಧ್ಯಕ್ಷರ ಕೊಠಡಿಯಲ್ಲಿರುವ ಗಣಕಯಂತ್ರಕ್ಕೆ ಹೊಸದಾಗಿ ಹೆಚ್.ಪಿ.ಲೇಜರ್ ಜೆಟ್ ಪ್ರಿಂಟರ್ ಅನ್ನು ಕೊಟೇಷನ್ ಅಥವಾ ಡಿ.ಜಿ.ಎಸ್. ಅಂಡ್ ಡಿ ದರದಲ್ಲಿ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 2 | ಶಿಥಿಲಗೊಂಡಿರುವ ಸರ್ಕಾರಿ ಶಾಲಾ ಕಟ್ಟಡಗಳನ್ನು ಕೆಡವಲು ಅನುಮತಿ ನೀಡುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀಮತಿ ಕುಸುಮ ಬಾಲಕೃಷ್ಣ ರವರು ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳನ್ನು ಬಹಳ ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಅವುಗಳು ತುಂಬಾ ಶಿಥಿಲಗೊಂಡ ಬೀಳುವ ಸ್ಥಿತಿಯಲ್ಲಿರುತ್ತವೆ. ಆದ್ದರಿಂದ, ತುಂಬಾ ಶಿಥಿಲಗೊಂಡಿರುವ ಶಾಲಾ ಕೊಠಡಿಗಳನ್ನು ಕೆಡವಲು ಅನುಮತಿ ನೀಡಬೇಕೆಂದು ಕೋರಿದರು. ಇದಕ್ಕೆ ಶ್ರೀಮತಿ ಜಿ.ಟಿ.ಇಂದಿರಾಧರ್ಮಪ್ಪರವರು ತಮ್ಮ ಸಹಮತವನ್ನು ವ್ಯಕ್ತಪಡಿಸುತ್ತಾ ಕೆಳಕಂಡ ಶಾಲೆಗಳನ್ನು ಕೆಡವಲು ಅನುಮತಿ ನೀಡಬೇಕೆಂದು ಕೋರಿದರು.<br>1. ಚನ್ನರಾಯಪಟ್ಟಣ ತಾ: ಮೇಗಲಕೆರೆ ಸರ್ಕಾರಿ ಹಿ.ಪ್ರಾ.ಶಾಲೆ<br>2. ಚನ್ನರಾಯಪಟ್ಟಣ ತಾ: ದಿಡಗ ತುಮಕೂರು ಸರ್ಕಾರಿ ಹಿ.ಪ್ರಾ.ಶಾಲೆ<br>3. ಬೇಲೂರು ತಾ: ಹೊಸಹಳ್ಳಿ ಸರ್ಕಾರಿ ಹಿ.ಪ್ರಾ.ಶಾಲೆ<br>4. ಬೇಲೂರು ತಾ: ಬಂಟೇನಹಳ್ಳಿ ಸರ್ಕಾರಿ ಹಿ.ಪ್ರಾ.ಶಾಲೆ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರು ಕೋರಿರುವಂತೆ ಶಿಕ್ಷಣ ಇಲಾಖೆಯ ಹೆಸರಿನಲ್ಲಿರುವ ಶಾಲೆಗಳ ಕಟ್ಟಡಗಳನ್ನು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದವರ ತಾಂತ್ರಿಕ ಅನುಮೋದನೆಯೊಂದಿಗೆ ಕೆಡವಲು ಅನುಮತಿಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

| | | | |
|---|---|---|---|
| | | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಸರ್ಕಾರದಿಂದ ನಾಲ್ಕೂ ಕಂತಿನ ಅನುದಾನ ಬಿಡುಗಡೆಯಾಗಿದ್ದು, ಜಿಲ್ಲಾ ಪಂಚಾಯಿತಿಯಿಂದ ಎಲ್ಲಾ ಇಲಾಖೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಯೋಜನೆಗಳ ಅನುಷ್ಠಾನಕ್ಕೆ ನಿಗದಿಪಡಿಸಿರುವ ಅನುದಾನವನ್ನು ವ್ಯಪಗತ ಮಾಡದೇ ಪೂರ್ಣ ಅನುದಾನವನ್ನು ವಿನಿಯೋಗಿಸಲು ಕ್ರಮ ವಹಿಸಬೇಕೆಂದು ಇಲಾಖಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಭೆಗೆ ವಿವರ ನೀಡಿದರು.<br>ಮುಂದುವರೆದು, ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ, ಕೆಲವು ಕಾಮಗಾರಿಗಳನ್ನು ಡೂಪ್ಲಿಕೇಷನ್ ಮಾಡಿರುತ್ತಾರೆ. ಅಂತಹ ಕಾಮಗಾರಿಗಳ ಬಗ್ಗೆ ಪರಿಶೀಲಿಸಿ ಡೂಪ್ಲಿಕೇಷನ್ ಆಗಿರುವ ಕಾಮಗಾರಿಗಳ ಬದಲಿ ಪಟ್ಟಿಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು.<br>ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತಾ, ಓವರ್ ಟ್ಯಾಂಕ್ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಟೆಂಡರ್ ಕರೆದು ಟೆಂಡರ್ ತೆರೆಯಲಾಗಿದ್ದು, ತ್ವರಿತವಾಗಿ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ವಿವರ ನೀಡಿದರು.<br>ಮುಂದುವರೆದು, 2012-13ನೇ ಸಾಲಿನ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಲು ಪ್ರಾರಂಭಿಸಲಾಗಿದ್ದು, ಕಾಮಗಾರಿಗಳ ಪಟ್ಟಿಯನ್ನು ಸಿದ್ದಪಡಿಸಲಾಗುತ್ತಿದೆ ಎಂದು ಸಭೆಗೆ ವಿವರ ನೀಡಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಗೌರಮ್ಮರವರು ಮಾತನಾಡುತ್ತಾ, ಹಳೇಕೋಟೆ ಹೋ: ತೆರಣ್ಯ ಮತ್ತು ಮಾವನೂರು ಗ್ರಾಮದ ಮಧ್ಯೆ ಆಯುಷ್ ಆರೋಗ್ಯ ಕೇಂದ್ರವಿದ್ದು, ಅಲ್ಲಿಗೆ ವೈದ್ಯರು ಮತ್ತು ಸಿಬ್ಬಂದಿಯವರಿಗೆ ವಸತಿ ಗೃಹಗಳನ್ನು ನಿರ್ಮಿಸಿಕೊಡಲು ಕ್ರಮ ವಹಿಸಬೇಕೆಂದು ಕೋರಿದರು. | |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

Sulochana

(ಸುಲೋಚನಾ ರಾಮಕೃಷ್ಣ),

ಅಧ್ಯಕ್ಷರು,

ಸಾಮಾನ್ಯ ಸ್ಥಾಯಿ ಸಮಿತಿ,

ಜಿಲ್ಲಾ ಪಂಚಾಯಿತಿ, ಹಾಸನ.